**ಸಾಕ್ಷಿಯನ್ನು ದಿನಾಂಕ 31.01.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ 1 ಮತ್ತು 2 ನೇ ಪ್ರತಿವಾದಿಯರ ಪರ ಶ್ರೀ ಎನ್ ಕೆ ಡಿ ವಕೀಲರಿಂದಃ**

ದಿನಾಂಕ 12.05.2009 ರಂದು ನನ್ನ ಮಗನಾದ ಎಂ.ಎನ್.ವೆಂಕಟಶಿವಾ ರವರು ದಾವಾ ಐಟಂ.7 ಕ್ಕೆ ಸಂಬಂಧಿಸಿದಂತೆ ನನಗೆ ಬರೆದುಕೊಟ್ಟ ಒಪ್ಪಿಗೆ ಕರಾರು ಪತ್ರವನ್ನು ಹಾಜರು ಮಾಡಿದ್ದು ಅದನ್ನು 3 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರ ತಕರಾರಿನ ಮೇರೆಗೆ ರುಜುವಾತುಪಡಿಸಿಸುವ ಹೊಣೆಗಾರಿಕೆಗೆ ಒಳಪಟ್ಟು **ನಿಡಿ 15** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಶ್ರೀ. ಎಂ ಎಸ್ ಸಿ ವಕೀಲರಿಂದಃ**

ವಾದಿ ದಾಖಲಿಸಿರುವ ಕೇಸಿನ ವಿಚಾರ ನನಗೆ ಗೊತ್ತು. ವಾದಿ ಮಾವಿನ ವ್ಯಾಪಾರ ಮಾಡಿ ಹಣವನ್ನು ನನಗೆ ನೀಡುತ್ತಿದ್ದರು ಎಂದರೆ ಸರಿ. ನಾನು ಕುಟುಂಬದ ಯಜಮಾನನಾಗಿದ್ದರಿಂದ ವಾದಿ ನೀಡುತ್ತಿದ್ದ ಹಣದಿಂದ ನಾನು ಬೆಂಗಳೂರಿನಲ್ಲಿ ಆಸ್ತಿಯನ್ನು ನನ್ನ ಮಗ ವೆಂಕಟಶಿವಾ ರವರ ಹೆಸರಿನಲ್ಲಿ ಖರೀದಿಸಿದ್ದೇನೆ ಎಂದರೆ ಸರಿ. ವಾದಿ ನನಗೆ ಆಸ್ತಿಗಳಲ್ಲಿ ಭಾಗ ಕೇಳಿದ್ದರಿಂದ ನಾನು ಇನ್ನೂ ಸ್ವಲ್ಪ ದಿನ ಕಳೆದು ಭಾಗ ನೀಡುತ್ತೇನೆ ಎಂದು ಹೇಳಿದ ಕಾರಣ ವಾದಿ ಈ ದಾವೆಯನ್ನು ತಂದಿದ್ದ ಎಂದರೆ ಸರಿ.

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಪಿ ಎಸ್ ಬಿ ವಕೀಲರಿಂದಃ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.